ಬರೆದು ಅವರ ಕೈಗಿಟ್ಟೇ ಕನ್ಯೆ ಮನೆಯಿಂದ ಎಕ್ಸಿಟ್ ಆಗಿದ್ದು.

***

ಮೀನಾಕ್ಷಿ ಹಿಗ್ಗಿ ಪಡವಲಕಾಯಾದಳು. ಹಡಬೆ ನಾಯಿಯಂತಾಗಿದ್ದ ರಮೇಶ, ಮೀನಾಕ್ಷಿ ಮನೆಗೆ ಆಗಾಗ ವಿಸಿಟ್ ಕೊಡಲುದ್ಯುಕ್ತನಾದ. 'ಸಿನಿಮಾಕ್ಕೆ ಹೋಗೋಣ ಬಾ' ಅಂದ. 'ಮನೆಯಾಗೆ ಒಪ್ಪಂಗಿಲ್ಲ' ಎಂದವಳಂದಾಗ ಮುನಿದ. 'ನೀವೆಂಥ ಅನ್‌ಎಜುಕೇಟೆಡ್ ಮಂದೀರಿ? ಯಾವ ಜಮಾನ್ದಾಗದ್ದೀರ್ರೀ? ಹೋಗ್ಲಿ ಬಜಾರ್ಗ್ಗಾರ ಕಳಿಸ್ರಿ' ಅಂತ ದನಿ ಏರಿಸಿದ. ಹುಡುಗಿ ಮನೆಯೋರಾರ ಎಂತದು ಮಾಡಿಯಾರು. 'ಹೋಗಿಬಾರವ್ವ... ಹುಷಾರು' ಅಂತ ಸನ್ನೆ ಮಾಡಿದರು.

ರಮೇಶ ಭಾವಿ ಪತ್ನಿಗಾಗಿ ಡ್ಯೂಟಿಗೆ ರಜಾ ಹಾಕಿದ. ಅವಳ ಖುಷಿಗಾಗಿ ಅವಳು ಕೇಳದಿದ್ದರೂ ಏನೆಲ್ಲಾ ಪರ್ಚೇಸ್ ಮಾಡಿ ಗಿಫ್ಟ್ ಅಂತ ಕೊಟ್ಟ. ಹೋಟಲ್ದಾಗ ದೋಸೆ ತಿನ್ನಿಸಿ ಐಸ್‌ಕ್ರೀಮ್ ಕೊಡಿಸಿದ. ಏನ್ ಕೊಡಿಸಿದರೇನು ಅವನು ಡಿಮ್ಯಾಂಡ್ ಮಾಡಿದ ಸಿಂಗಲ್ 'ಕಿಸ್ಸೂ' ದಕ್ಕಲಿಲ್ಲ. ಕೈ ಮುಟ್ಟಿದರೆ ಸಿಡುಕೋಳು, ಮೈ ತಾಗಿದರೆ ಅಸ್ಪೃಶ್ಯನನ್ನು ನೋಡುವಂತೆ ನೋಡಿ ದೂರ ಸರಿವಳು. ಅವನೋ ಮತ್ತಷ್ಟು ಉನ್ಮತ್ತನಾಗುವನು. 'ನಾವು ಮನೆತನಸ್ಥಾರದ್ದೀವ್ರಿ. ಇಂಥದ್ದನ್ನೆಲ್ಲಾ ಲಗ್ನ ಆದಮ್ಯಾಗೆ ಇಟ್ಕೋರಿ. ನಿಮ್ಮ ಅಳುಮುಂಜಿ ನೋಡಿ ನಿಮ್ಮ ಜೊತೆಯಾಗೆ ಕಳುಹಿಸಿಯಾರ. ಆಟೆಯಾ, ಸುಮ್ಮ ತಕಲೀಫ್ ಕೊಡಬ್ಯಾಡ್ರಿ' ಎಂದವಳು ಕಣ್ಣೀರು ಹಾಕೋವಾಗ ಇವನ ಉತ್ಸಾಹವೆಲ್ಲಾ ಭಸ್ಮ.

ರಾತ್ರಿಯೆಲ್ಲಾ ಅವಳ ನೆನಪಲ್ಲೇ ಮುಷ್ಟಿಮೈಥುನ ಮಾಡಿಕೊಂಡ. ಇವನ ಆಟವೇನೂ ಅವಳ ಮುಂದೆ ಸಾಗಲಿಲ್ಲ. ಮೊದಲು ವರದಕ್ಷಿಣೆ ಬ್ಯಾಡ ಅಂದು, ಆಮ್ಯಾಲೆ ವಸೂಲಿಗಿಳಿದ ಅವನ ಬಗ್ಗೆ ಅವಳಲ್ಲಿ ತಿರಸ್ಕಾರವಿತ್ತು. ಲಗ್ನ ಒಂದಾಗ್ಲಿ ನನ್ನ ಮೈ ಮುಟ್ಟೋಕೂ ಚಾರ್ಜ್ ಫಿಕ್ಸ್ ಮಾಡ್ತೀನಿ ಅಂತ ಮನಸಲ್ಲೇ ಮಂಡಿಗೆ ತಿಂದಳು. ಮದುವೆ ಡೇಟ್ ಫಿಕ್ಸ್ ಆದ ಮೇಲಂತೂ ರಮೇಶ ಮೂಗುದಾರ ಬಿಚ್ಚಿದ ಹೋರಿಯಂತಾಡಿದ. ಮೀನಾಕ್ಷಿಯ ಅಪ್ಪನಂತೂ ಈಗ ವೆರಿ ಸ್ಟ್ರಿಕ್ಟ್ ಆದ. 'ಏನಿದ್ರೂ ಮನೆಯಾಗಳ ರೂಮಿನಾಗೆ ಕುಂತು ಮಾತಾಡ್ರಿ' ಎಂಬ ಕಂಡೀಷನ್ ಹಾಕಿದ. ರೂಮನಾಗೆ ಕುಂತ ಮಾತಾಡೋದಾರ ಏನೈತೆ? ಏನಾರ ಮಾತಾಡು ಮಾತಾಡು ಅಂತ ಅವಳನ್ನು ಪೀಡಿಸಿ ಜಗಳವಾಡಿದ್ದಷ್ಟೇ ಬಂತು. ಮೀನಾಕ್ಷಿ ಸಾನಿಧ್ಯದಲ್ಲವನು ದೇವದಾಸ್‌ನಂತಾದ್ದ ಮತ್ತಷ್ಟು ಮುಜುಗರವನ್ನುಂಟು ಮಾಡಿದ.

ಇಂತಹ ದಿನಗಳಲ್ಲೆ ಅದೊಂದು ಶಾಕಿಂಗ್ ನ್ಯೂಸ್ ಟೀವಿನಾಗೆ ಬರಲಾರಂಭಿಸಿದಾಗ ಕುಸಿದುಹೋದ ರಮೇಶ. ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ನಡೆದಿದೆ, ತನಿಖೆಯಾಗಬೇಕಿದೆ. ನೇಮಕಾತಿ ಪಟ್ಟಿ ವಜಾಗೊಳಿಸಲಾಗಿದೆ. ಲಂಚ ನೀಡಿದವರ ಪಟ್ಟಿ ಪತ್ತೆಯಾಗಿದೆಯೆಂದು ಟೀವಿನೋರು ಹೇಳಿದ್ದನ್ನೇ ನೂರಾ ಒಂದು ಬಾರಿ ಹೇಳಿ ರಮೇಶನಲ್ಲಿ ದಿಗಿಲು ಹುಟ್ಟಿಸಿದರು.



'ನಾವು ಲಂಚ ನೀಡಿಲ್ಲ. ಚೆನ್ನಾಗಿಯೇ ಬರೆದು ರ‍್ಯಾಂಕ್ ಬಂದೀವಿ, ಕೋರ್ಟ್‌ಗೆ ಹೊಕ್ಕಿವಿ' ಅಂದ್ರು ಕೆಲವರು. ಎಡಬಿಡಂಗಿಯಂತಾದದ್ದು ಲಕ್ಷಗಟ್ಟಲೆ ತೆತ್ತ ಇವನು–ಇವನಪ್ಪನು ಮಾತ್ರ. ಮೀನಾಕ್ಷಿ ಮನೆಯಾಗೂ ಟೀವಿ ಇತ್ತಲ್ಲ. ಅವರಪ್ಪನ ಜಂಘಾಬಲವೇ ಹುದುಗಿತು. ಅಕ್ರಮವಾಗಿ ನೇಮಕವಾದವರನ್ನೆಲ್ಲಾ ಬಂಧಿಸಲಾರಂಭಿಸಿದಾಗ ತನ್ನ ಸರದಿ ಯಾವಗಲೋ ಎಂಬ ದಿಗಿಲಿಗೆ ಬಿದ್ದಿದ್ದು ರಮೇಶ. ಸರ್ಕಾರಿ ನೌಕ್ರಿ ಐತೆ, ಮುಂದಿನ ದಿನದಾಗ ಇನ್ಸ್‌ಪೆಟ್ರೂ ಆಗೋನನದಾನ ಅಂತ್ಲೆ ಸಂಬಂಧ ಒಪ್ಪಿ ಡೌರಿ ನೀಡಿದ್ದ ಎಣ್ಣೆ ವ್ಯಾಪಾರಿ ಮಾವನೀಗ ಹೌಹಾರಿದ. ಜಗಳಕ್ಕೆ ಬಿದ್ದ.

'ನಿಮ್ಮ ಮಗ ಅರೆಷ್ಟ್ ಆಗೋನದಾನೆ. ನಾವು ಕೊಟ್ಟ ರೊಕ್ಕನಾರ ವಾಪಾಸ್ ಮಾಡ್ರಿ' ಅಂತ ಮನೆಗೇ ಬಂದು ಕೂತುಬಿಟ್ಟ. 'ನೋಡ್ರಿ, ಇದ್ರಾಗೆ ಸರ್ಕಾರಿ ಅಧಿಕಾರಿಗಳೇ ಶಾಮೀಲಾಗವರೆ ಏನೂ ಆಗೋದಿಲ್ಲ. ಲಗ್ನ ಮಾಡೋದೆಯಾ' ಅಂದ ರಮೇಶನ ಪಿತಾಮಹ, ನೆಂಟರಿಗೆ ಧೈರ್ಯ ತುಂಬಲೆತ್ನಿಸಿದ. 'ಹಂಗೇನಾರ ಆತೋ ಕೋರ್ಟಿಗೆ ಹೊಕ್ಕಿವಿ ಬಿಡ್ರಿ' ಎಂದೂ ಹಾರಾಡಿದ. 'ಎಲ್ಲಿಗಾರ ಹೋಗ್ರಿ ಅದು ನಿಮ್ಮ ಹಣೆಬರಾ, ವರದಕ್ಷಿಣೆ ರೊಕ್ಕ ಮೊದ್ಲು ತಂದು ಬಡಿರ್ರಿ. ನಿಮ್ಮ ಸಂಬಂಧವೇ ಬ್ಯಾಡ ನಮ್ಗೆ. ಸತಾಯಿಸಿದ್ರೋ ಪೊಲೀಸ್ ಕಂಪ್ಲೇಂಟ್ ಕೊಡಬೇಕಾಗ್ತದೆ' ಎಂದು ಜಬರ್‌ದಸ್ತ್ ಮಾಡುತ್ತಲೇ ಮೀನಾಕ್ಷಿ ತಂದೆಯು ಕುಂತ ಜಾಗದಲ್ಲೇ ರಮೇಶನಿಗೆ ಕೊಟ್ಟಿದ್ದ ವಾಚು, ಉಂಗುರ, ಕೊಳ್ಳ ಚೈನು, ಬ್ರಾಸ್‌ಲೈಟ್ಟು ಬಿಚ್ಚಿಸಿಕೊಂಡ. ಮಧ್ಯಸ್ಥರಾಗಿ ಬಂದವರೂ ಹೆಣ್ಣಿನೋರ ಪರವಾಗೇ ನಿಂತಾಗ ರಮೇಶನ ಪಿತಾಶ್ರೀ ಕೊನೆದಾಳ ಪ್ರಯೋಗಿಸದೇ ಇರಲಿಲ್ಲ. 'ಯಾರಿಗೆ ಏನಾಗ್ತದೆ ನನಗೆ ಗೊತ್ತಿಲ್ಲ. ನನ್ನ ಮಗಂತೂ ಮಸ್ತು ಬರ್ದಿದಾನೆ. ಸೆಲೆಕ್ಟೂ ಆಗಿದಾನೆ. ಅವನ್ನ ಯಾವ ಬೇಸೀಸ್ ಮೇಲೆ ಅರೆಸ್ಟ್ ಮಾಡ್ತಾರ್ರೀ? ನಮಗೇನು ಕಾನೂನು ಗೊತ್ತಿಲ್ವೆ? ಅದಿರ್ಲಿ, ನಿಮ್ಮ ಹುಡ್ಗಿ ನಮ್ಮ ಹುಡುಗನ ಜೊತೆಯಾಗೆ ಊರು ತುಂಬಾ ಅಲೆದವ್ಳೆ. ಊರು ಮಂದೆಲ್ಲಾ ನೋಡೈತಿ. ಅವಳನ್ನ ಯಾರ್ರಿ ಲಗ್ನ ಆದಾರು?' ಎಂದು ತಿರುಗೇಟು ಕೊಟ್ಟ ಪಿತಾಶ್ರೀ.

ರಮೇಶನಂತೂ ಮುಂದಿನ ಕರಾಳ ಭವಿಷ್ಯವನ್ನು ನೆನೆದೇ ಮೂಕನಂತಾಗಿ ಬಿಟ್ಟಿದ್ದ. ರಮೇಶನ ಪಿತಾಶ್ರೀ ತಿರುಗೇಟಿಗೆ ಮೀನಾಕ್ಷಿ ತಂದೆ ಬಗ್ಗಲಿಲ್ಲ. 'ಜೊತೆನಾಗೆ ಅಡ್ಡಾಡಿದ್ಲು ಅಂತ ಈವತ್ನೋ ನಾಳೆನೋ ಅರೆಸ್ಟ್ ಆಗೋನಿಗೆ ಮಗಳ್ನ ಕೊಡಕಾದೀತೇನ್ರಿ? ಮೊದ್ಲು ರೊಕ್ಕ ಬಿಸಾಡ್ರಿ' ದಬಾಯಿಸಿದ. ಹೆಣ್ಣಿನ ತಂದೆಯ ಪರವಾಗೇ ನಿಂತರು ಮಧ್ಯಸ್ಥರೂವೆ. ಕಡೆಗೆ ವಾರೋಪ್ಪತ್ತಿನಲ್ಲಿ ರೊಕ್ಕ ತಂದು ಕೊಡುವುದಾಗಿ ರಮೇಶನ ಪಿತಾಶ್ರೀ ವಾಗ್ದಾನ ಮಾಡಿದ. ಇಷ್ಟಾದರೂ ಒಂದು ದಿನ ಇದ್ದಕ್ಕಿದ್ದಂತೆ ಮೀನಾಕ್ಷಿ ಮನೆಗೆ ಬಂದ ರಮೇಶ, 'ಅಲ್ಲೇ ಮೀನಾಕ್ಷಿ, ನಾನ್ ನಿನಗಾಗಿ ಎಷ್ಟು ಗಿಫ್ಟ್ ಕೊಡಿಸಲಿಲ್ಲ. ನನ್ನ ಮ್ಯಾಲೆ ಲವ್ ಇಲ್ಲದಿದ್ರೆ ನನ್ನ ಸಂಗಡ ತಿರುಗುತ್ತಿದ್ದೇನು? ಲವ್ವರ್ಗೇ ಮೋಸ ಮಾಡ್ತಿಯೇನು?' ಎಂದು ಕ್ಯಾತೆ ತೆಗೆದ. 'ನಿನ್ನ ಬಲವಂತಕ್ಕೆ ನಾನು ನಿನ್ನ ಜೊತೆಯಾಗೆ ಬಂದ್ನೋ ಮಾರಾಯ, ಲವ್ವು, ಪವ್ವು ನನ್ಗೆ ಗೊತ್ತಿಲ್ಲ. ಸಿನಿಮಾದಾಗೆ ಕಂಡಿನಷ್ಟೆಯಾ. ನನ್ನ ನಿನ್ನ ಮಧ್ಯದಾಗ ಅಂತದ್ದೇನ್ ನಡೆದೈತೆ ಬೊಗಳು?' ಸಿಂಗಿಲರ್ ಆಗಿಯೇ ಮೀನಾಕ್ಷಿ ತರಾಟೆ ತೆಗೆದುಕೊಂಡಳು.

'ಹಂಗಾರೆ, ನನ್ನ ನೀ ಇಷ್ಟಪಡದಲೆ ಮದುವೆಗೆ ಒಪ್ಪಿಕೊಂಡೇನು?' ಎಂದು ರಮೇಶ ರೇಗಿದಾಗ ದೇಹಾದ್ಯಂತ ನಡುಕ. 'ಹಿರೇರು ಇಷ್ಟಪಟ್ಟರು ಅಂತ ನಾನೂ ಒಪ್ಪೊಂಡೆ. ಯಾರ್ ನೀನು? ನೀನೇನ್ ನನ್ನ ಕಾಲೇಜ್‌ಮೇಟಾ? ಬಾಜೂ ಮನೆಯೋನಾ? ಯಾರ್‌ನೀ? ಯಾವತ್ತು ವರದಕ್ಷಿಣೆಗೆ ಕೈಚಾಚಿದ್ಯೋ ಆವತ್ತೇ ನೀನ್ ಲಾಯಕ್ಕಿಲ್ಲ ಅನ್ಕೊಂಡೆ. ಹಿರೇರು ಕಳಿಸಿದ್ದಕ್ಕೆ ನಿನ್ನ ಜೊತೆನಾಗೆ ಅಡ್ಡಾಡಿದೆ ತಿಳ್ಕೋ' ಎಂದು ಮೂತಿ ಸೊಟ್ಟಮಾಡಿ ಸರಕ್ಕನೆ ಕೋಣೆಗೆ ಸರಿದಳು ಮೀನಾಕ್ಷಿ. ಕಾಲೆಳೆದುಕೊಂಡು ತನ್ನ ಮನೆಯತ್ತ ಮುಖ ಮಾಡಿದ ರಮೇಶ.

ಯಾರೊಪ್ಪಲಿ ಬಿಡಲಿ, ಡೇಟ್ ಫಿಕ್ಸ್ ಆದ ದಿನವೇ ಮೀನಾಕ್ಷಿಯ ಮದುವೆ ಬೇರೆ ಗಂಡಿನೊಂದಿಗೆ ವಿಜೃಂಭಣೆಯಿಂದ ನಡೆದುಹೋಯಿತು. ಪಿಎಸ್‌ಐ ನೇಮಕಾತಿ ಅಕ್ರಮದ ಕೇಸಲ್ಲಿ ಸಿಕ್ಕಿಬಿದ್ದ ರಮೇಶನ ಬಂಧನವೂ ಅದೇ ದಿನ ನಡೆದು ಹೋಯಿತೆಂದರೆ ನೀವು ನಂಬಲೇಬೇಕು.

ಪ್ರತಿಕ್ರಿಯಿಸಿ: feedback@sudha.co.in